JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಬೀದರ್ ಜಿಲ್ಲೆಯ ತತ್ವಪದಗಳಲ್ಲಿ ಸೌಹಾರ್ದತೆ

**ಡಾ.ಸಾರಿಕಾದೇವಿ ಎಲ್ ಕಾಳಗಿ**
**ಸಹಾಯಕ ಪ್ರಾಧ್ಯಾಪಕರು**
**ಕನ್ನಡ ಅಧ್ಯಯನ ಮತ್ತು ಸಂಶೋಧನ ವಿಭಾಗ**
**ಶರಣಬಸವ ವಿಶ್ವವಿದ್ಯಾಲಯ**
**ಕಲಬುರಗಿ**

ಕಲ್ಯಾಣ ಕರ್ನಾಟಕ ಭಾವೈಕ್ಯತೆಯ ತವರೂರು. ಈ ಭಾಗದಲ್ಲಿ ಶರಣರು, ದಾಸರು, ಸಂತರು, ತತ್ವಪದಕಾರರು ಮನುಷ್ಯ ಜೀವನೋದ್ಧಾರ ಮತ್ತು ನವಸಮಾಜದ ನಿರ್ಮಾಣಕ್ಕಾಗಿ ಅನೇಕ ರೀತಿಯ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ಜಾತಿ–ವರ್ಗ–ವರ್ಣ ಲಿಂಗಬೇಧವನ್ನು ಮೀರಿ ನಿಲ್ಲುವ ಪ್ರಯತ್ನಕ್ಕೆ ಹೆಚ್ಚು ಮಹತ್ವ ಕೊಟ್ಟಿದ್ದಾರೆ. ಧಾರ್ಮಿಕ ಔದಾರ್ಯತೆಯನ್ನು ಮೆರೆದ ಇವರು ಜೀವಪರ ಸಂವೇದನೆಗಳಾಗಿಯೇ ತಮ್ಮ ಇಡೀ ಜೀವನವನ್ನು ಮುಡುಪಾಗಿಟ್ಟು ಮಾನವ ಧರ್ಮದ ಮೂಲ ಸೆಲೆಗ'ಳನ್ನು ಬಿತ್ತಿ ಬೆಳೆದಿದ್ದಾರೆ. ಭಕ್ತಿ, ಅರಿವು–ಆಚಾರ, ಸಾಮಾಜಿಕ ಪ್ರಜ್ಞೆ, ಆಧ್ಯಾತ್ಮ, ಮುಂತಾದ ಇಹ–ಪರ ನಿಲುವುಗಳಿಗೆ ಬದ್ಧರಾಗಿ ವ್ಯಕ್ತಿತ್ವ ವಿಕಾಸದ ಚಿಂತನಾ ಕ್ರಮಗಳಿಗೆ ಹೊಸ ಆಯಾಮಗಳನ್ನು ಒದಗಿಸಿಕೊಟ್ಟಿದ್ದಾರೆ. ಸ್ವಾತಂತ್ರಯ–ಸಮಾನತೆ– ಸಹೋದರತ್ವದ ಮೂಲ ಮಂತ್ರಗಳನ್ನು ಬಿತ್ತಿದ ಇವರು ಸಹಬಾಳ್ವೆಯ ಮೂಲಕ ಸಮಾಜದ ಸರ್ವಾಂಗೀಣ ಪ್ರಗತಿ ಸಾಧ್ಯ ಎನ್ನುವುದನ್ನು ಸಾಧಿಸಿ ತೋರಿಸಿದ್ದಾರೆ. ಸಹಬಾಳ್ವೆ, ಸಹಿಷ್ಣುತೆ'ಗೆ ಈ ಭಾಗದಲ್ಲಿ ಬಹುದೊಡ್ಡ ಪರಂಪರೆ ಇದೆ. ಕ್ರಿಸ್ತಶಕ ೮೫೦ರಲ್ಲಿ ಈ ಭಾಗದಲ್ಲಿ ರಚನೆಗೊಂಡ ಕನ್ನಡ ಮೊಟ್ಟ ಮೊದಲ ಉಪಲಬ್ಧ ಕೃತಿ ಕವಿರಾಜಮಾರ್ಗದಲ್ಲಿ "ಕಸವರಮೆಂಬುದು ನೆರೆ ಸೈರಿಲಾರ್ಪೊಡೆ ಪರಧರ್ಮಮುಂ ಪರವಿಚಾರಮುಂ" ಎನ್ನುವ ಚಿನ್ನದಂತಹ ಮಾತಿದೆ. ಇದರರ್ಥ ಕನ್ನಡಿಗರು ಎಂದಿನಿಂದಲೂ ಸಹಿಷ್ಣುಗಳಾಗಿದ್ದರು. ಪರಧರ್ಮವನ್ನು ಗೌರವಿಸುವುದರ ಜೊತೆಗೆ ಪರವಿಚಾರಗಳನ್ನು ಮನ್ನಿಸುತಿದ್ದರು. ಈ ರೀತಿಯ ಪರಧರ್ಮ ಪರವಿಚಾರಗಳ ಸಹಿಷ್ಣುತೆ'ಯ ಗುಣ ಕನ್ನಡಿಗರಲ್ಲಿ ರಕ್ತಗತವಾಗಿಯೇ ಬಂದಿರುವುದು ನೋಡುತ್ತೇವೆ. ಇಂತಹ ಹೆಮ್ಮೆಯ ಗುಣದ ಮೊಳಕೆಯೊಡೆದದ್ದು ಈ ಭಾಗದಲ್ಲಿಯೇ ಎನ್ನುವುದು ವಿಶಿಷ್ಟ ಅಂಶವಾಗಿದೆ.

ಹನ್ನೆರಡನೇ ಶತಮಾನದಲ್ಲಿ ಕಲ್ಯಾಣವನ್ನು ಕೇಂದ್ರವಾಗಿಸಿಕೊಂಡು ಬಸವಾದಿ ಪ್ರಮಥರು ಸೌಹಾರ್ದತೆಗಾಗಿ ಬಹುದೊಡ್ಡ ಆಂದೋಲನವನ್ನು ಮಾಡಿದ್ದಾರೆ. ಅಂದು ಶರಣರು ಕಟ್ಟಿದ ಅನುಭವ ಮಂಟಪ ಸೌಹಾರ್ದತೆಯ ಕೇಂದ್ರವಾಗಿತ್ತು. ಶರಣರು ಕಟ್ಟ ಬಯಸಿದ ಸಮಾಜ, ರಾಜ್ಯ, ರಾಷ್ಟ್ರವಲ್ಲ ಇಡೀ ವಿಶ್ವಕ್ಕೆ ಅದು ಮಾದರಿಯಾಗಿತ್ತು. ಸಮಾಜದ ಎಲ್ಲಾ ವರ್ಗದ ಜನ ವೈಚಾರಿಕವಾಗಿ ಮಾತಾಡಿ ಸೌಹಾರ್ದಪಥ ಪದದ ಸೌಧವನ್ನು ನಿರ್ಮಿಸಿದ್ದು ಇದೊಂದು ಜಾಗತಿಕ ದಾಖಲೆಯೇ ಸರಿ. ಇದರಿಂದ ಪ್ರಭಾವಿತರಾದ ಜನ ಭರತಖಂಡದ ಮೂಲೆ ಮೂಲೆಗಳಿಂದ ಕಲ್ಯಾಣಕ್ಕೆ ಹರಿದು ಬಂದರು. ಹೀಗಾಗಿ ಇದು ಸ್ಥಳೀಯ ಒಂದು ಪ್ರದೇಶದ ಚಳುವಳಿಯಾಗದೇ ಇಡೀ ಭರತ ಖಂಡದ ಚಳುವಳಿಯಾಯಿತು. ಇದು ಮುಂದೆ ದಾಸರಿಗೂ ಪ್ರೇರಣೆ ನೀಡಿತು. ಹದಿನೈದನೆಯ ಶತಮಾನದಲ್ಲೇ ವಿಜಯನಗರದ ಅರಸರ ಕಾಲದಲ್ಲಿ ಧರ್ಮ ಸಂಘರ್ಷ ಪ್ರಾರಂಭವಾಯಿತು. ಮುಸ್ಲಿಂ ಅರಸರ ದಾಳಿಯಿಂದ ಧಾರ್ಮಿಕ ಬಿಕ್ಕಟ್ಟು ಉಂಟಾಗಿತ್ತು. ಹಿಂದೂ ಧರ್ಮದ ಪುನರುತ್ಥಾನಕ್ಕಾಗಿ ಹಕ್ಕ ಬುಕ್ಕರು ವಿಜಯನಗರದ ಸಾಮ್ರಾಜ್ಯವನ್ನು ಸ್ಥಾಪಿಸಿದರು. ವಿಜಯನಗರದ ಅರಸರು ದಾಸ ಸಾಹಿತ್ಯಕ್ಕೆ ಪ್ರೇರಣೆ ನೀಡಿದ್ದರಲ್ಲದೆ, ವಚನ ಸಾಹಿತ್ಯದ ಸಂಪಾದನೆ, ಸಂಕಲನ, ಟೀಕೆ ಮುಂತಾದ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ವೈಷ್ಣವ–ವೀರಶೈವ ಧರ್ಮಗಳೆರಡನ್ನೂ ಸಮನ್ವಯ ದೃಷ್ಟಿಕೋನದಿಂದ ಕಂಡರು. ಅಷ್ಟೇ ಅಲ್ಲ ಮುಸ್ಲಿಂ ಧರ್ಮಕ್ಕೂ ಪ್ರಾಶಸ್ತ್ಯ ನೀಡಿದರು. ಎಲ್ಲಾ ಧರ್ಮೀಯರು ಸಮಾನವಾಗಿ ಬಾಳುವ ಅವಕಾಶ ಒದಗಿಸಿಕೊಟ್ಟರು. ಮುಸ್ಲಿಮರ ದಾಳಿಯಿಂದ ವಿಜಯನಗರ ಸಾಮ್ರಾಜ್ಯ ಪತನಗೊಂಡ ನಂತರ ಇಡೀ ಕಲ್ಯಾಣ ಕರ್ನಾಟಕ ಹಂತ ಹಂತವಾಗಿ ಮುಸ್ಲಿಂ ಅರಸರ ವಶವಾಯಿತು. ಮುಸ್ಲಿಂ ಅರಸರ ಧರ್ಮಪರ ಧೋರಣೆಗಳಿಂದ ಸಹಬಾಳ್ವೆ, ಸಹಿಷ್ಣುತೆಯ ಕನಸು ನುಚ್ಚುನೂರಾಯಿತು. ಇದನ್ನು ಹೋಗಲಾಡಿಸಲಾಕ್ಕಿಗೆಯೇ ಎನ್ನುವಂತೆ ಸೂಫಿಗಳ ಆಗಮನವಾಯಿತು. ಇವರ ಮುಖ್ಯ ಉದ್ದೇಶ ಧರ್ಮ ಪ್ರಚಾರವಾದರೂ ಹಿಂದೂ–ಮುಸ್ಲಿಮರಲ್ಲಿ ಐಕ್ಯಮತ ಸಾಧಿಸಿ, ಸಾಮಾಜಿಕ ಸಾಮರಸ್ಯವನ್ನುಂಟು ಮಾಡುವುದೇ ಆಗಿತ್ತು. ಹೀಗಾಗಿ ಇವರ ಜೀವಪರ ಧೋರಣೆ ಅನೇಕ ಜನ ಹಿಂದೂ ಧರ್ಮದ ಮಹಾತ್ಮರಿಗೆ ಸ್ಫೂರ್ತಿಯ ಸೆಲೆಯಾಯಿತು. ಹಿಂದೂ–ಮುಸ್ಲಿಮರ ಸಾಮರಸ್ಯ ಮೂಡಿಸಲು ಎರಡು ಧರ್ಮಗಳವರು ಕಂಕಣಬದ್ಧರಾದರು. ಸಾಮಾಜಿಕ ಸಾಮರಸ್ಯಕ್ಕಾಗಿ ಹೊಸ ಚಳುವಳಿ ಪ್ರಾರಂಭಿಸಿದರು. ಈ ಚಳುವಳಿಯ ಅಭಿವ್ಯಕ್ತಿಯ ಮಾಧ್ಯಮಗಳಾಗಿ ತತ್ವಪದಗಳು ಹುಟ್ಟಿಕೊಂಡವು. ಹದಿನೇಳು–ಹದಿನೆಂಟನೆಯ ಶತಮಾನದಲ್ಲಿ ಪ್ರಾರಂಭವಾದ ತತ್ವಪದ ಸಾಹಿತ್ಯ ಮುಂದೆ ಅವ್ಯಾಹತ'ವಾಗಿ ನಡೆದು ಬಂದಿತು. ಕಲಬುರಗಿ, ರಾಯಚೂರು, ಬೀದರ್ ಜಿಲ್ಲೆಗಳಲ್ಲಿ ಅಸಂಖ್ಯಾತ ತತ್ವಪದಕಾರರು ಹುಟ್ಟಿಕೊಂಡರು. ಇವರು ಧರ್ಮಜಾತಿ ಮತ– ಪಂಥಗಳನ್ನು ಮೀರಿ ಬೆಳೆದು ನಿಂತರು.ಇಂತಹ ಪರಂಪರೆ ಹೊಂದಿದ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಬೀದರ್ ಜಿಲ್ಲೆಯ ತತ್ವಪದಕಾರರು ವಿಶಿಷ್ಟ ವಾಗಿ ಕಂಡುಬರುತ್ತಾರೆ.

ಬೀದರ್ ಜಿಲ್ಲೆ ಶರಣರು–ಸಂತರು ಮಹಾಂತರು ಬಾಳಿಬೆಳಗಿದ' ಜಿಲ್ಲೆ. ಇಲ್ಲಿ ನಡೆದ ಶಿವಶರಣರ ಸಾಮಾಜಿಕ ಸೌಹಾರ್ದತೆಯ ಆಂದೋಲನ ತತ್ವಪದಕಾರರ ಮೇಲೆ ಅಚ್ಚಳಿಯದ ಪ್ರಭಾವ ಬೀರಿದೆ. ಇದುವರೆಗೆ ಬೀದರ್ ಜಿಲ್ಲೆಯಲ್ಲಿ ೧೬೦ಕ್ಕಿಂತಲೂ ಹೆಚ್ಚು ತತ್ವಪದಕಾರರನ್ನು ವಿದ್ವಾಂಸರು

ಗುರುತಿಸಿದ್ದಾರೆ. ಇವರೆಲ್ಲರೂ ಎಲ್ಲಾ ಧರ್ಮ–ಜಾತಿ–ಜನಾಂಗದಿಂದ ಬಂದವರಾಗಿದ್ದಾರೆ. ಅದರಲ್ಲಿ ಕೆಳವರ್ಗದ ತತ್ವಪದಕಾರರು ಹೆಚ್ಚಾಗಿ ಕಂಡು ಬರುತ್ತಾರೆ. ಎಲ್ಲಾ ವರ್ಗದಿಂದ ಬಂದ ತತ್ವಪದಕಾರರು ಅಸಂಖ್ಯಾತ ತತ್ವಪದಗಳನ್ನು ರಚಿಸಿದ್ದಾರೆ. ಈ ತತ್ವಪದಗಳಲ್ಲಿ ಹೆಚ್ಚಾಗಿ ಸಂಸಾರಿಕ ಬದುಕಿನ ನಿಸ್ಸಾರತೆ, ಆಧ್ಯಾತ್ಮಿಕ ಅನುಸಂಧಾನ, ಸಾಮಾಜಿಕ ಪ್ರಜ್ಞೆ, ವೈಚಾರಿಕ ನಿಲುವುಗಳು ಸಾಮಾಜಿಕ ಸೌಹಾರ್ದತೆ ಬಹುಮುಖ್ಯ ಅಂಶಗಳಾಗಿ ಕಂಡುಬರುತ್ತವೆ. ತತ್ವಪದಕಾರರು ವರ್ತಮಾನ ಬದುಕಿನ ತಲ್ಲಣಗಳಿಗೆ ಸ್ಪಂದಿಸಿದರು.

ಬೀದರ್ ಜಿಲ್ಲೆಯ ತತ್ವಪದಕಾರರ ಮೇಲೆ ಶರಣರ ಪ್ರಭಾವ ಸಹಜವಾಗಿಯೇ ಆಗಿರುವುದರಿಂದ ಅನೇಕ ತತ್ವಪದಕಾರರರು ಅನ್ಯ ಮತದವರಾದರೂ ಕೂಡ ಶರಣರ ತತ್ವಗಳನ್ನು ಆಚರಣೆಯಲ್ಲಿ ತಂದಿದ್ದಾರೆ. ಅದರಲ್ಲೂ ಮುಸ್ಲಿಂ ತತ್ವಪದಕಾರರು ಶಿವಶರಣರಿಂದ ವಿಶೇಷವಾಗಿ ಪ್ರಭಾವಿತರಾಗಿರುವುದನ್ನು ಕಾಣುತ್ತೇವೆ. ಮುಸ್ಲಿಂ ಅರಸರ ಕ್ರೌರ್ಯ ಮತ್ತು ಸಾಂಪ್ರದಾಯಿಕ ನಿಲುವುಗಳಿಗೆ ಪ್ರತಿಯಾಗಿ ಧರ್ಮಸಮನ್ವಯ ಪರ ನಿಲುವುಗಳನ್ನು ಮುಸ್ಲಿಂ ತತ್ವಪದಕಾರರು ಜನಮಾನದಲ್ಲಿ ಬಿತ್ತುವ ಪ್ರಯತ್ನ ಮಾಡಿದ್ದಾರೆ. ಅರಿವು ಆಚಾರಕ್ಕೆ ಮಹತ್ವ ಕೊಟ್ಟು ಇವರು ಸಾಮಾಜಿಕ ಸೌಹಾರ್ದತೆ ಬೆಳೆಸಲು ಪ್ರಗತಿಪರ ಚಿಂತಕರ ಜೊತೆ ಕೈಜೋಡಿಸಿದ್ದಾರೆ. ಧರ್ಮಾಭಿಮಾನ ನಿರಸನಗೊಳಿಸಿಕೊಂಡು ಸಾತ್ವಿಕ ಪಥವನ್ನನುಸರಿಸಿದ್ದಾರೆ. ಅದರಂತೆ ಮುಸ್ಲಿಮರಲ್ಲದ ತತ್ವಪದಕಾರರು ಸ್ವಧರ್ಮಾಭಿಮಾನದ ಜೊತೆಗೆ ಮುಸ್ಲಿಂ ಧರ್ಮಕ್ಕೂ ಗೌರವ ನೀಡಿ ಸಹಬಾಳ್ವೆ ಸಹಿಷ್ಣುತೆಯ ಸಾಕಾರ ಮೂರ್ತಿಗಳಾಗಿದ್ದಾರೆ. ಇವರಲ್ಲಿ ಬೋರಗಿಯ ರೆಹಮಾನ್ ಸಾಬ್‌ಪಟೇಲ್, ಕೊಹಿನೂರಿನ ಹುಸನ್‌ಸಾಬ್ ನದಾಫ್, ಮುಡಬಿಯ ಮಸ್ತ್ ಅಲಿಶಾ ಖಾದ್ರಿ, ಬಾಗಹಿಪ್ಪರಗಾದ ನಬಿಲಾಲ್ ಅಣದೂರದ ಜಾಹೂರ್ ಅಲಿಸಾಬ್, ಅಮೀರಾಬಾದ ವಾಡಿಯ ಅಜೀಜ್ ಪಟೇಲ್, ಮರಕುಂದಿಯ ಬಸವಣಪ್ಪ, ಬೀದರನ ಕಾಶಿನಾಥ ಶಿಂಧೆ,(ಪಂಚಶೀಲಗವಾಯಿ) ಲಾಧಾದ ಶಿವರಾಯ ಮುಚಳಂಬಿ, ಶೆಂಬೆಳ್ಳಿಯ ಬಾಬಣ್ಣ ಹರಿಜನ, ಚಿಕ್ಕ ಆಲೂರಿನ ಮಡಿವಾಳಪ್ಪ, ಕೆಂಚಾ, ಖಾನಾಪುರದ ರಾಣಪ್ಪ ಜಮಾದಾರ, ಕೊಹಿನೂರಿನ ವೀರಣ್ಣ ಸಂತಾಜಿ, ಸಿರಗಾಪುರದ ನಾಗೇಂದ್ರಪ್ಪ ಬಿರಾದಾರ, ಹಾರಕೂಡದ ಶಂಕರ ಶೀಲವಂತ, ಹುಲಸೂರಿನ ಶಿವಾನಂದ ಸ್ವಾಮೀಜಿ, ಬ್ಯಾಲಹಳ್ಳಿಯ ಕರಿಬಸವೇಶ್ವರ, ಖಟಕ ಚಿಂಚೋಳಿಯ ಅಪ್ಪಾರಾವ ಕುಲಕರ್ಣಿ, ಕರಡ್ಯಾಳದ ಸಂಗಪ್ಪ ಬಿರದಾರ, ಧುಮನಸೂರಿನ ಸಿದ್ಧಪ್ರಭು, ಚಿಟಗುಪ್ಪದ ಶಿಲ್ಲಪ್ಪ ಭೂತಾಳೆ,ಹಣಮಂತಪ್ಪ ಮಂಕಾಲ್, ಮುಂತಾದ ಅನೇಕ ತತ್ವಪದಕಾರರು ಬೀದರ ಜಿಲ್ಲೆಯಲ್ಲಿ ಸೌಹಾರ್ದತೆಯ ಕೃಷಿ ಮಾಡಿದ್ದಾರೆ. ಇವರು ಶರಣ ಪರಂಪರೆ, ಸಂತ ಪರಂಪರೆ, ದಾಸ ಪರಂಪರೆ, ಸೂಫಿ ಪರಂಪರೆಗಳ ವಾರಸುದಾರರಾಗಿ ಕಂಡುಬರುತ್ತಾರೆ. ತತ್ವಪದಕಾರರು ಸಮಾಜದ ಎಲ್ಲಾ ವರ್ಗಗಳಿಂದ ಬಂದವರು. ವ್ಯಕ್ತಿತ್ವ ವಿಕಾಸ ಮತ್ತು ಸಮಾಜ ಸುಧಾರಣೆಗಾಗಿ ಜೀವನವನ್ನು ಸವೆಸಿದ್ದಾರೆ.

ತತ್ವಪದಕಾರರು ಅಂದಿನ ಪ್ರಸ್ತುತ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ. ಜಾತಿ–ಸಂಘರ್ಷ, ಧರ್ಮ ಸಂಘರ್ಷ ಉಂಟಾದಾಗ ಅದಕ್ಕೆ ಉತ್ತಮ ರೀತಿಯಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ. ರೆಹಮಾನ್ ಸಾಬ್ ಎಂಬ ತತ್ವಪದಕಾರ ಸೌಹಾರ್ದತೆಯ ಪ್ರತೀಕವಾಗಿ ಹೀಗೆ ಹೇಳಿದ್ದಾರೆ.

ಶಿವ–ಅಲ್ಲಾ ಬ್ಯಾರೆ ಇಲ್ಲ
ಭವದೊಳಗೆ ಒಬ್ಬನೇ ಎಲ್ಲಾ
ಹಿಂದೂ–ಮುಸ್ಲಿಮ ಬ್ಯಾರೆ ಇಲ್ಲಾ
ಅವರೆಲ್ಲ ಶಿವನ ಮಕ್ಕಳೆಲ್ಲ

ಭೂಮಂಡಲದೊಳಗ ಬೇದ ಭಾವ
ಶಿವಮಂಡಲದೊಳಗ ಇಲ್ಲ ಹೇವಾ
ಶರಣಾಗಿ ಅಲ್ಲಾಗ ಬಾಗೊ ಚೇಲಾ
ನೀವು–ನಾವು ಒಂದೇ ಅನ್ನತೀನಿ ಖುಲ್ಲಾ

ಶಿವಶರಣರ ದೇವನೊಬ್ಬ ನಾಮ ಹಲವು ಎಂಬ ನಿಲುವನ್ನೇ ರೆಹಮಾನ್ ಸಾಬರು ತತ್ವಪದದಲ್ಲಿ ಪ್ರತಿಪಾದಿಸಿದ್ದಾರೆ. "ಶಿವ ಅಲ್ಲಾ ಬೇರೆ ಇಲ್ಲಾ ಭವದೊಳಗೆ ಒಬ್ಬನೇ ಅಲ್ಲಾ" ಎನ್ನುವಲ್ಲಿ ಸಾಮರಸ್ಯದ ಭಾವ ಮೂಡಿ ಬಂದಿದೆ. ತತ್ವಪದಕಾರರಲ್ಲಿ ಭಕ್ತಿ ಆತ್ಮಶೋಧನೆ ಯೋಗ ಆಧ್ಯಾತ್ಮಿಕತೆ ವೈಚಾರಿಕತೆ ದೈವದ ವಿಶ್ವ ವ್ಯಾಪಕತೆ, ಸಾಮಾಜಿಕ ಪ್ರಜ್ಞೆ, ಮುಂತಾದ ಅಂಶಗಳು ಪ್ರಮುಖವಾಗಿ ಕಂಡುಬರುತ್ತವೆ.

ಮನುಷ್ಯನ ಬದುಕು ಸಾರ್ಥಕವಾಗುವುದು ಪರೋಪಕಾರಿಯಾದಾಗ ಮಾತ್ರ ಎನ್ನುವುದನ್ನು ಸಿದ್ರಾಮಪ್ಪ ತರನಾಳೆ ಎನ್ನುವ ತತ್ವಪದಕಾರರು "ನೀ ಹುಟ್ಟಿ ಬಂದದ್ದೇನು ಫಲ?" ಎನ್ನುವ ತತ್ವಪದದಲ್ಲಿ ವಿವರಿಸುವ ರೀತಿ ಅದ್ಭುತವಾದದ್ದು.

ಏನು ಫಲವೋ ಏನು ಫಲವಣ್ಣಾ
ನೀ ಹುಟ್ಟಿ ಬಂದುದೇನು ಫಲವಣ್ಣ
ಮನುಷ್ಯಾಗಿ ಹುಟ್ಟಿದರೇನು ಫಲಾ?
ಹಸಿದು ಬಂದವರಿಗೆ ಅನ್ನವ ನೀಡದೆ
ಕಸಿದು ತಿಂದರೇನು ಫಲಾ ?
ಗರ್ವದಿ ನಡೆಯುತಾ ಬಡವರ ತುಳಿಯುತ
ಸೊಕ್ಕಿಲೆ ಮೆರೆದರೇನು ಫಲಾ?
ಮೂರು ಆಶೆ ಮೀರದೆ

ಮನ ಪಾಕ ಮಾಡದೆ
ಕಾಶಿಗೆ ಹೋದರೆ ಏನು ಫಲಾ ?

ಮನುಷ್ಯ ಸ್ವಾರ್ಥಪರತೆ ಅಳಿದು ಪರಾರ್ಥಕ್ಕಾಗಿ ಹಂಬಲಿಸುವ ಭಾವ ಅನನ್ಯವಾದದ್ದು.

ತತ್ವಪದಕಾರರು ಗುರು-ಶಿಷ್ಯ ಪರಂಪರೆಯಿಂದ ಬೆಳೆದು ಬಂದವರು. ಗುರುವಿನ ಪ್ರಾಮುಖ್ಯತೆಯನ್ನು ಅರಿತವರು. ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿಯ ಎನ್ನುವ ಧೋರಣೆಯ ಹಿನ್ನೆಲೆಯಲ್ಲಿ ಬದುಕಿದ ತತ್ವಪದಕಾರರು ಗುರು ಮುಕ್ತಿಯ ಮಾರ್ಗದರ್ಶಕ ಎನ್ನುವದನ್ನು ಬಲವಾಗಿ ನಂಬಿದವರು.

ಗುರು ಪೂಜಿ ಮಾಡೋ
ನಿರುತಾಗಿ ನಮಿಸಿ ನೀ ಕೂಡೋ
ಹೊರತಾಗಿ ನೀ ಜರಿಯ ಬೇಡೋ
ಪರತತ್ವದೊಳಗ ನೀ ಕೂಡೋ (ಶೆಂಬೆಳ್ಳಿಯ ಬಾಬಣ್ಣ)

ಗುರು ಮುಕ್ತಿಯ ಮಾರ್ಗಕ್ಕೆ ಸೇತುವೆಯಂತಿರುವನು, ಗುರುಧ್ಯಾನದಿಂದ ಮಾತ್ರ ಪರತತ್ವದಲ್ಲಿ ಲೀನವಾಗಲು ಸಾಧ್ಯ ಎನ್ನುವ ಭಾವ ಇಲ್ಲಿದೆ. ಗುರು ಭವಬಂಧನವನ್ನು ಬಿಡಿಸುವನು. ಅದಕ್ಕಾಗಿ ಅಂತಹ ಗುರುವನ್ನು ಕೊಡು ಎಂದು ದೇವದ ಮೊರೆ ಹೋಗಿದ್ದಾರೆ.

ನಿಂತ ನೋಡೋ ನದಿದೊಳಗೆ
ಕೈಹಿಡಿದುದಾಟಿಸು ನೀ ಎನಗೆ
ಲೋಟ ಮ್ಯಾಲೋಟ ಬಂತೊ
ಜೀವ ಹೋಗುತಾದ ಅನಂ'ತೊ
ನಿಜಗುರುವಿನ ನಿಜವ ತೋರೋ(ಜರೂರ ಅಲಿಸಾಬ)

ಹೆಂಡರಮಕ್ಕಳ ಮೋಹದೇ ಸಿಲುಕಿ
ವ್ಯರ್ಥಕಾಲವನು ಕಳೆಯುವಿ ಮನವೆ
ಸಮರ್ಥ ಗುರುಗಳ ಪಾದವ ಹೊಂದಿ
ಮೋಕ್ಷ ಮಾರ್ಗ ನೀ ತಿಳಿ ಮನವೇ (ವಿರುಪಾಕ್ಷಯ್ಯಮಠಪತಿ)

ಭವಬಂಧನ ತೊರೆದು ಪಾರಮಾರ್ಥ ಬದುಕಿಗೆ ಅಣಿಗೊಳ್ಳಲು ಗುರುವಿನ ಕೃಪೆಬೇಕೆನ್ನುವ ಹಂಬಲ ತತ್ವಪದಕಾರರಿಗಿದೆ. ಈ ಹಿನ್ನೆಲೆಯಿಂದ ಅರಿಷಡ್ವರ್ಗಗಳು,ಅಷ್ಟಮದಗಳು ಮಲತ್ರಯಗಳು ಮೆಟ್ಟಿ ನಿಲ್ಲುವ ಚಿಂತನೆ ತತ್ವದಕಾರರಲ್ಲಿದೆ. ಇವುಗಳ ನಿರಸನದಿಂದ ವ್ಯಕ್ತಿತ್ವ ವಿಕಾಸ ಮತ್ತು ಸಾಮಾಜಿಕ ಉನ್ನತಿ ಎರಡೂ ಸಾಧ್ಯ ಎನ್ನುವುದನ್ನು ಅವರು ಬಲವಾಗಿ ನಂಬಿದ್ದರು.

ಶರಣರಂತೆ ತತ್ವಪದಕಾರರೂ ಲಿಂಗಸಮಾನತೆಯ ತತ್ವಗಳನ್ನು ಹೇಳಿದ್ದಾರೆ. ಹೆಣ್ಣು ಮಾಯೆಯಲ್ಲ ಹೆಣ್ಣು ಸಾಕ್ಷತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎನ್ನುವ ಶರಣರ ನಿಲುವನ್ನು ಇವರೂ ಒಪ್ಪಿಕೊಂಡಿದ್ದಾರೆ.

ಹೆಣ್ಣು -ಗಂಡಿನ ಬಂಧನಾ
ಆಗಿ ಲೋಕ ನಿರ್ಮಾಣ
ಹೆಣ್ಣಲ್ಲ ಬರೇ ಸತಿ । ಅವಳೆ ದೇವತೆ
ಹೆಣ್ಣು-ಗಂಡಾಂತ ಭೇದ ಬಿಡಿರಿ
ಎರಡು ಸಮನಾಂತ ತಿಳಿರಿ
ಹೆಣ್ಣು ಅಂದರೆ ಹುಣ್ಣಲ್ಲ
ಹೆಣ್ಣು ಅಂದರೆ ಜಗದ ಕಣ್ಣು
ಹೆಣ್ಣು ಸಣ್ಣವಳಲ್ಲ ತಮ್ಮ
ಅವಳೆ ಇರುವಳು ಶಿವನ ಕಣ್ಣು

ಧರ್ಮಕ್ಕೆ ಹೆಣ್ಣು ಅಧಿಪತಿ
ಧ್ಯಾನಕ್ಕೆ ಹೆಣ್ಣೆ ಅಧಿಪತಿ
ಧನಕ್ಕೆ ಹೆಣ್ಣೆ ಅಧಿಪತಿ
ಲೋಕ ಲೋಕಕ್ಕೆ ಅವಳೆ ದೇವತಿ (ಸಿದ್ರಾಮಪ್ಪ ತರನಾಳೆ)

ಎನ್ನುವಲ್ಲಿ ಹೆಣ್ಣಿನ ಬಗ್ಗೆ ವಿಶಾಲವಾದ ದೃಷ್ಟಿಕೋನ ತತ್ವಪದಕಾರ ಹೊಂದಿರುವುದನ್ನು ಕಾಣುತ್ತೇವೆ.

ಹೀಗೆ ಬೀದರ ಜಿಲ್ಲೆಯ ತತ್ವಪದಕಾರರು ತಮ್ಮೆದುರಿನ ಅನೇಕ ಜಲ್ವಂತ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ. ಜಾತ್ಯತೀತ ಮನೋಭಾವನೆ, ಭಕ್ತಿ, ಆಧ್ಯಾತ್ಮಿಕ ಚಿಂತನೆ ಸರ್ವಧರ್ಮಸಮಭಾವ ಅಂತರಂಗಶುದ್ಧಿ,ಸಮಾಜ ಹಸನಾಗಬೇಕೆಂಬ ಹಂಬಲ, ಭವದ ಸಾಗರ ಈಸಬೇಕೆಂಬ ಹೆಬ್ಬಯಕೆ ಅವರಲ್ಲಿ ಪ್ರಬಲವಾಗಿ ಕಂಡುಬರುತ್ತವೆ. ಸ್ವಾತಂತ್ರ್ಯ ಹೋರಾಟ, ರಾಷ್ಟ್ರಪ್ರೇಮ, ಮಹಾತ್ಮ ಗಾಂಧೀಜಿಯವರ ಕುರಿತು ತತ್ವಪದಗಳನ್ನು ರಚಿಸುವುದರ ಮೂಲಕ ರಾಷ್ಟ್ರೀಯ ಆಂದೋಲನದಲ್ಲಿ ಪಾಲ್ಗೊಂಡಿದ್ದಾರೆ.ವಿಶಿಷ್ಟವೆಂದರೆ ನಿಜಾಂನ ಆಳ್ವಿಕೆಯಲ್ಲಿದ್ದ ಮುಸ್ಲಿಂ ತತ್ವಪದಕಾರರು ನಿಜಾಮನ ನಿರಂಕುಶ ರಾಜಪ್ರಭುತ್ವವನ್ನು ಪ್ರಶ್ನಿಸಿ, ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ಸೂಚಿಸಿ ತತ್ವಪದಗಳನ್ನು ರಚಿಸಿ ರಾಷ್ಟ್ರಪ್ರೇಮವನ್ನು ಮೆರೆದಿದ್ದಾರೆ. ಇಂತಹ ವಿಶಿಷ್ಟ ತತ್ವಪದಕಾರರು ಬೀದರ ಜಿಲ್ಲೆಯಲ್ಲಿ ಕಂಡುಬರುತ್ತಾರೆ.

ಸಂದರ್ಭಗ್ರಂಥಗಳು:

೧) ಬೀದರ ಜಿಲ್ಲೆಯ ಅನುಭಾವ ಕವಿಗಳು: ಡಾ. ಗುರುಲಿಂಗಪ್ಪ ಧಬಾಲೆ: ವಿಶ್ವಗುರು ಬಸವಧರ್ಮಪ್ರಚಾರ ಕೇಂದ್ರ ಹುಲಸುರ–೨೦೦೬
೨) ಬೀದರ ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು–ಸಂಪುಟ–೧:ಡಾ.ಎಸ್ ಎಮ್. ಹಿರೆಮಠ :ಗುಲಬರ್ಗಾ ವಿಶ್ವವಿದ್ಯಾಲಯ–೨೦೧೨
೩) ಬೀದರ ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು–ಸಂಪುಟ–೨:ಡಾ.ಎಸ್ ಎಮ್. ಹಿರೆಮಠ :ಗುಲಬರ್ಗಾ ವಿಶ್ವವಿದ್ಯಾಲಯ–೨೦೧೨
೪) ಬೀದರ ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು–ಸಂಪುಟ–೩:ಡಾ.ಎಸ್ ಎಮ್. ಹಿರೆಮಠ :ಗುಲಬರ್ಗಾ ವಿಶ್ವವಿದ್ಯಾಲಯ–೨೦೧೨
೫) ಕಲ್ಯಾಣ ದೀಪ್ತಿ: ಸಂ.ಡಾ. ಗುರುಲಿಂಗಪ್ಪ ಧಬಾಲೆ: ಹಿರೆಮಠ ಸಂಸ್ಥಾನ ಭಾಲ್ಕಿ –೨೦೧೪